# ಫ್ಯಾಂಟಸಿ ಅನುಭವಿಸಲು ಸಖತ್ತಾಗಿರುತ್ತೆ

## ಕಾವ್ಯಾ ಮಹಾದೇವ್

ಸ್ಟಾರ್ ಸುವರ್ಣದ 'ಸ್ನೇಹದ ಕಡಲಲ್ಲಿ'ನ ಪಲ್ಲವಿ



◆ **ನಿಮ್ಮ ರಿಯಾಲಿಟಿ ಶೋ ಸ್ಪರ್ಧೆಯ ಅನುಭವ ಹೇಗಿತ್ತು?**

ರಿಯಾಲಿಟಿ ಶೋ ಬಗ್ಗೆ ಆಸಕ್ತಿ ಇರಲಿಲ್ಲ. 'ರಾಜಾ ರಾಣಿ'ಗೆ ಕರೆಬಂದಾಗ ಆಯ್ಕೆ ಮಾಡಿಕೊಳ್ಳುವುದೋ ಎಂಬ ಗೊಂದಲದಲ್ಲಿ ಇದ್ದೆ. ಇದು ದಂಪತಿ ಭಾಗವಹಿಸುವ ಕಾರ್ಯಕ್ರಮ. ಅದನ್ನು ನನ್ನ ಪತಿಗೆ ವಿಷಯ ತಿಳಿಸಿದೆ. ಅವರು ಮರುಕ್ಷಣವೇ ಹಸಿರು ನಿಶಾನೆ ತೋರಿಸಿದರು. ನನ್ನ ಮೊದಲ ರಿಯಾಲಿಟಿ ಶೋ. ಅದೂ ನನ್ನ ಪತಿ ಜೊತೆ ಕೆಲಸ ಮಾಡುವ ಅವಕಾಶ. ಅವರ ಜೊತೆ ಡಾನ್ಸ್–ನಟನೆ ಮಾಡುವುದು ತುಂಬ ಚೆನ್ನಾಗಿತ್ತು. ಸಹನಟರ ಜೊತೆ ಅಭಿನಯಿಸುವುದಕ್ಕಿಂತ ಭಿನ್ನವಾಗಿತ್ತು.

◆ **'ನಮ್ಮನೆ ಯುವರಾಣಿ' ನಂತರ ಸ್ವಲ್ಪ ಸಮಯ ಕಿರುತೆರೆಯಲ್ಲಿ ಕಾಣಲಿಲ್ಲ ಏಕೆ?**

'ನಮ್ಮನೆ ಯುವರಾಣಿ' ಮತ್ತು 'ರಾಜ ರಾಣಿ' ಹೆಚ್ಚೂ ಕಡಿಮೆ ಏಕಕಾಲದಲ್ಲಿ ಮುಗಿದವು. ಆನಂತರ ನಾನು ಬೇರೆ ಕೆಲಸದಲ್ಲಿ ಬಿಜಿಯಾದೆ. ಬೇರೆ ಏನಾದರೂ ಮಾಡಲು ಅದೇ ಸರಿಯಾದ ಸಮಯ ಆಗಿತ್ತು. ತಕ್ಷಣವೇ ಬೇರೆ ಅವಕಾಶಗಳು ಬಂದವು. ಅಭಿನಯಕ್ಕೆ ಮತ್ತೆ ಬರುವುದು ಕಷ್ಟವಲ್ಲ ಎನ್ನುವ ಕಾರಣಕ್ಕೆ ಅವೆಲ್ಲವನ್ನೂ ಬದಿಗೆ ಇಟ್ಟು ಒಂದು ವರ್ಷ ನನಗಾಗಿ ಬ್ರೇಕ್ ತೆಗೆದುಕೊಂಡಿದ್ದೆ.

◆ **ಸಾಮಾಜಿಕ ಮಾಧ್ಯಮ ಮತ್ತು ಆ ಜನಪ್ರಿಯತೆ ಹೇಗೆ ನಿರ್ವಹಣೆ ಮಾಡುತ್ತೀರಿ?**

ದೊಡ್ಡ ಪ್ರಮಾಣದ ಫಾಲೊವರ್ಸ್‌ಗಳೇನೂ ಇಲ್ಲ. ಆದರೆ ಪ್ರಾಮಾಣಿಕ ಫಾಲೊವರ್ಸ್ ಇದ್ದಾರೆ. ಅಲ್ಲಿ ತುಂಬ ಕ್ರಿಯಾಶೀಲವಾಗಿಯೂ ಇಲ್ಲ. ಹೋದಲ್ಲೆಲ್ಲ ಫೋಟೊ ತೆಗೆದುಕೊಳ್ಳುವ ಹವ್ಯಾಸವೂ ಕಡಿಮೆ. ದಿನವೂ ಪೋಸ್ಟ್ ಅಪ್‌ಡೇಟ್ ಮಾಡುವುದು ಅಷ್ಟಕ್ಕಷ್ಟೇ. ಆದರೂ ನನ್ನ ಫಾಲೊವರ್ಸ್ ಮಾತ್ರ ಅನ್‌ಫಾಲೊ ಮಾಡಲ್ಲ. ಅವರ ಸಂದೇಶಗಳಿಗೆ ಉತ್ತರ ನೀಡುತ್ತೇನೆ. ಕಿರುತೆರೆ ನಟನೆಯಿಂದ ಸ್ವಲ್ಪ ದಿನ ಬ್ರೇಕ್ ತೆಗೆದುಕೊಂಡಾಗಲೂ ಮತ್ತೆ ಯಾವಾಗ ಮರಳುತ್ತೀರಿ ಎಂದು ಕೇಳುತ್ತಿದ್ದರು. ಸೀರಿಯಲ್ ಬಗ್ಗೆ ಅವರು ಕೇಳುವ ಪ್ರಶ್ನೆಗಳಿಗೆ ಪ್ರತಿಕ್ರಿಯೆ ನೀಡುತ್ತೇನೆ.

◆ **'ನಾ ನಿನ್ನ ಬಿಡಲಾರೆ'ಯಲ್ಲಿ ಖಳನಾಯಕಿಯ ಪಾತ್ರವನ್ನು ಆಯ್ಕೆ ಮಾಡಿಕೊಂಡಿದ್ದು ಏಕೆ?**

ಕಲಾವಿದರಿಗೆ ಬೇರೆ ಬೇರೆ ಪಾತ್ರಗಳ ನಿರ್ವಹಣೆ ಖುಷಿ ಕೊಡುತ್ತದೆ. ಕಿರುತೆರೆಯಲ್ಲಿ ವಿಭಿನ್ನವಾದ ಪಾತ್ರ ಸಿಗುವುದು ಕಡಿಮೆ. ಸಾಮಾನ್ಯವಾಗಿ ಪುನರಾವರ್ತನೆ ಆಗುತ್ತಿರುತ್ತವೆ. ಅದರಲ್ಲೂ ನಾಯಕಿ ಮುಗ್ಧೆ, ಅಳುಮುಂಜಿ ಸ್ವಭಾವದವಳೇ ಆಗಿರುತ್ತಾಳೆ. ಬಹುತೇಕ ಪಾತ್ರಗಳ ಗುಣ ವಿಶೇಷದಲ್ಲಿ ಹೆಚ್ಚಿನ ಅಂತರ ಇರುವುದಿಲ್ಲ. ಅನೇಕ ಭಿನ್ನ ಪಾತ್ರಗಳನ್ನು ಮಾಡಿದ್ದರೂ ಕಾಂಚನಾ ತುಂಬ ಇಷ್ಟ ಆಗಿತ್ತು. ನನ್ನ ಮೊದಲ ಧಾರಾವಾಹಿ 'ಚರಣದಾಸಿ' ಮಾಡುವಾಗ ಖಳನಾಯಕಿ ಪಾತ್ರ ಇಷ್ಟ ಆಗುತ್ತಿತ್ತು. ಆ ಪಾತ್ರವನ್ನು ನಾಗಶ್ರೀ ನಿರ್ವಹಿಸುತ್ತಿದ್ದರು. ಆ ಕಾರಣಕ್ಕೆ ಅವರು ಇಷ್ಟ ಆಗುತ್ತಿದ್ದರು. ಅಂತಹ ಪಾತ್ರ ಮಾಡಬೇಕು ಎಂದು ಅನ್ನಿಸುತ್ತಿತ್ತು. ಅದನ್ನು ಅವರ ಜೊತೆ ಹಂಚಿಕೊಂಡಿದ್ದೂ ಇದೆ.

'ನಾ ನಿನ್ನ ಬಿಡಲಾರೆ' ದೆವ್ವದ ಪಾತ್ರಕ್ಕೆ ಸಾಕಷ್ಟು ಹುಡುಕಿದ್ದಾರೆ. ನನಗೊಂದು ಕರೆ ಬಂತು. ತಕ್ಷಣ ನಾನು ಮಾಡುವೆ ಎಂದು ಒಪ್ಪಿಕೊಂಡೆ. ನೆಗೆಟಿವ್ ಶೇಡ್ ಹೆಚ್ಚು ಪರ್ಫಾರ್ಮೆನ್ಸ್ ಬಯಸುತ್ತದೆ. ಅಂತಹ ಪಾತ್ರ ಮಾಡಬೇಕು ಎಂದು ನನಗೆ ಯಾವಾಗಲೂ ಅನ್ನಿಸುತ್ತಿತ್ತು. ಈ ಪಾತ್ರಕ್ಕೆ ಬಣ್ಣ ಹಚ್ಚಿದಾಗ ಕುಟುಂಬ ವರ್ಗದವರು 'ಇದುವರೆಗೆ ನಾಯಕಿ ಪಾತ್ರ ಮಾಡಿದ್ದೀಯಾ, ಯಾಕೆ ಇದನ್ನು ಮಾಡುತ್ತೀಯಾ? ಲೀಡ್ ಮತ್ತೆ ಬರುತ್ತೆ ಇರು' ಎಂದು ಹೇಳುತ್ತಿದ್ದರು. ನನಗೆ ಇಷ್ಟ ಆಗಿದ್ದರಿಂದಲೇ ಅದನ್ನು ಮಾಡಿದ್ದೆ. ಆ ಪಾತ್ರವನ್ನು ತುಂಬ ಎಂಜಾಯ್ ಮಾಡಿದ್ದೇನೆ. ಅದರಲ್ಲಿ ಸ್ಟಂಟ್ ಕೂಡ ಇತ್ತು. ಈ ಸಂದರ್ಭದಲ್ಲಿ ಎದುರಾದ ಎಲ್ಲ ಸವಾಲುಗಳು ಮಜಾಕೊಟ್ಟವೆ.

◆ **ಪಲ್ಲವಿ ಪಾತ್ರವನ್ನು ಹೇಗೆ ನೋಡುತ್ತಿದ್ದೀರಿ?**

ಪಲ್ಲವಿಯ ನೇಚರ್ ಸಾಫ್ಟ್. ಆಕೆ ಅನ್ಯಾಯವನ್ನು ಸಹಿಸುವುದಿಲ್ಲ. ಮದುವೆ ಆದ ಮೊದಲ ದಿನವೇ ಗಂಡ ಸರಿ ಇಲ್ಲ ಎನ್ನುವುದು ಆಕೆಗೆ ಗೊತ್ತಾಗುತ್ತದೆ. ಮುಂದೆ ಎಲ್ಲ ಸರಿಹೋಗುತ್ತದೆ ಎಂದು ಬಹುತೇಕರಿಗೆ ಅನ್ನಿಸಬಹುದು. ಆದರೆ ಆಕೆ ಹಾಗಲ್ಲ. ತನಗೆ ಅನ್ಯಾಯ ಆಗಿದೆ. ಅದನ್ನು ಪ್ರತಿರೋಧಿಸುತ್ತೇನೆ ಎನ್ನುತ್ತಾಳೆ. ಮೃದು ಸ್ವಭಾವದವಳೇ ಆಗಿದ್ದರೂ ಅನ್ಯಾಯದ ವಿರುದ್ಧ ನಿಲ್ಲುತ್ತಾಳೆ. ಆಕೆಯ ತವರಿನವರೇ ಅವಳ ನಿಲುವನ್ನು ವಿರೋಧಿಸುತ್ತಾರೆ. ಆಕೆ ಹೊಂದಾಣಿಕೆ ಮಾಡಿಕೊಳ್ಳುವ ಸಲಹೆಗಳನ್ನು ನಿರಾಕರಿಸಿ, ತಾನು ಒಂಟಿಯಾಗಿ ನಿಂತು ನ್ಯಾಯಕ್ಕಾಗಿ ಹೋರಾಡುವ ದಿಟ್ಟತನ ತೋರಿಸುತ್ತಾಳೆ. ಈ ರೀತಿ ಅನೇಕರ ಜೀವನದಲ್ಲಿ ನಡೆದಿರಬಹುದು. ಅನೇಕರು ನನ್ನ ಜೊತೆ ಇಂತಹ ಸಂಗತಿ ಹಂಚಿಕೊಂಡಿದ್ದಾರೆ. ಅವರಿಗೆ ವಿರೋಧ ಮಾಡಲು ಅಸಾಧ್ಯ ಆಗಿದ್ದರೂ ಅದನ್ನು ತೆರೆಯಲ್ಲಿ ಕಾಣುತ್ತಿದ್ದಾರೆ. ಮನಸ್ಸು ಮಾಡಿದರೆ ಬದಲಾವಣೆ ಸಾಧ್ಯ ಅನ್ನುವ ಸಂದೇಶವನ್ನು ಈ ಪಾತ್ರ ನೀಡುತ್ತದೆ. ಪಲ್ಲವಿ ಅನ್ಯಾಯವನ್ನು ಸಹಿಸುವುದಿಲ್ಲ ಎಂದು ಹೇಳುತ್ತಾಳೆ. ಅವಳ ಈ ನಿರ್ಧಾರದಿಂದ ಶಿವನ ಜೊತೆ ಒಳ್ಳೆಯ ಗೆಳೆತನ ಬೆಳೆಸಲು ಸಾಧ್ಯವಾಗಿದೆ.

■ **ರಾಘವೇಂದ್ರ ಕೆ.**